



# ರಗ್ಗಡ್ ಆ್ಯಕ್ಷನ್ ಸಿನಿಮಾ ಮಾಡಬೇಕು

**ರಚನಾ ಸ್ಮಿತ್**
**ಝೀ ಕನ್ನಡದ 'ಕಮಲಿ'ಯ ಅನಿಕಾ**

◆ **ನಟನೆಯ ಒಲವು ಮೂಡಿದ್ದು ಹೇಗೆ?**

ನನ್ನ ಕುಟುಂಬ ವಲಯದಲ್ಲಿ ಯಾರೂ ಮನೋರಂಜನಾ ಕ್ಷೇತ್ರದಲ್ಲಿ ಇಲ್ಲ. ನನ್ನ ಎಂಟನೆಯ ವಯಸ್ಸಿನಲ್ಲಿಯೇ ಟೀವಿಯಲ್ಲಿ ಬರಬೇಕು ನಾನೂ ನಟಿಸಬೇಕು ಎನ್ನುವ ಕನಸು ಮೂಡಿತ್ತು. 10ನೇ ತರಗರತಿ ಮುಗಿಯುತ್ತಿದ್ದಂತೆಯೇ ಮಾಡೆಲಿಂಗ್ ಆರಂಭಿಸಿದೆ. ಅಲ್ಲಿ ಎರಡು ವರ್ಷ ಕೆಲಸ ಮಾಡಿದೆ. ಅದೇ ಸಮಯದಲ್ಲಿ ಝೂಮ್ ವಾಹಿನಿಗೆ ಒಂದು ರಿಯಾಲಿಟಿ ಶೋ ಮಾಡಿದ್ದೆ. ಮಾಡಲಿಂಗ್‌ನಲ್ಲಿ ಅಷ್ಟು ನೆಮ್ಮದಿ ಅನ್ನಿಸಲಿಲ್ಲ. ಅಭಿನಯವನ್ನು ಮಾಡಬೇಕು ಎಂದು ಯೋಚನೆ ಮಾಡಿದೆ. ಮಾಡೆಲಿಂಗ್ ಆರಂಭಿಸಿದ ಮೇಲೆಯೇ ನನಗೆ ಆಡಿಷನ್ ಬಗ್ಗೆ ಗೊತ್ತಾಯಿತು. ಮೊದಲು 'ವರದನಾಯಕ' ಎಂಬ ಸಿನಿಮಾಕ್ಕೆ ಆಡಿಷನ್ ನೀಡಿದ್ದೆ. ಚಿಕ್ಕ ಪಾತ್ರ ಸಿಕ್ಕಿತ್ತು ನಂತರ 'ವಿಕ್ಟರಿ'ಯಲ್ಲಿಯೂ ಪಾತ್ರ ಮಾಡಿದೆ. ಅಭಿನಯವನ್ನೇ ಕಲಿಯಲು ಶುರುಮಾಡಿದೆ. ಅದಾದ ನಂತರ ಝೀ ಕನ್ನಡದ ರಿಯಾಲಿಟಿ ಶೋ 'ಲೈಫ್ ಸೂಪರ್ ಗುರು'ಗೆ ಆಯ್ಕೆಯಾದೆ. ತೆಲುಗಿನಲ್ಲಿ ಎರಡು ಸಿನಿಮಾದಲ್ಲಿ ಮುಖ್ಯ ಪಾತ್ರಗಳನ್ನೇ ಮಾಡಿದ್ದೆ. ಆದರೆ ಅವು ಜನರನ್ನು ದೊಡ್ಡಮಟ್ಟದಲ್ಲಿ ತಲುಪಲಿಲ್ಲ. ಅದರ ಜೊತೆ ಕನ್ನಡ ಸಿನಿಮಾದಲ್ಲೂ ಅವಕಾಶ ಸಿಕ್ಕಿತ್ತು ಅದೂ ಕೂಡ ಅದೇ ಕಥೆ. ಅಷ್ಟರಲ್ಲಾಗಲೇ ನಾನು ಅಭಿನಯ ಜಗತ್ತಿಗೆ ಬಂದು ಏಳೆಂಟು ವರ್ಷಗಳೇ ಕಳೆದಿದ್ದವು. ಸಿನಿಮಾ ಸಿಕ್ಕರೂ ಅವು ಜನಪ್ರಿಯ ಆಗುತ್ತಿರಲಿಲ್ಲ. ಅದೇ ಸಮಯಕ್ಕೆ ಉದ್ಯೋಗ ಮಾಡುವುದೇ ಒಳಿತು ಎಂದೂ ಯೋಚಿಸಿದ್ದೆ. ಆ ಸಮಯದಲ್ಲಿ ನನ್ನ ಅಕ್ಕ ದುಬೈನಲ್ಲಿ ಕೆಲಸ ಮಾಡುತ್ತಿದ್ದರು. ಸೀರಿಯಲ್ ಆಡಿಷನ್ ನೀಡಲು ಆಪ್ತರು ಸಲಹೆ ನೀಡಿದರು. ಆಗ ಅದಕ್ಕೇ ಸೀಮಿತ ಆಗುತ್ತೇನೆ ಎನ್ನುವ ಹಿಂಜರಿಕೆಯಲ್ಲೇ ಬಂದೆ. ಈ ಪಾತ್ರಕ್ಕೆ 9 ಬಾರಿ ಆಡಿಷನ್ ನೀಡಿದ್ದೇನೆ. ನನ್ನ ಉಚ್ಚರಣೆ ಅಷ್ಟು ಚೆನ್ನಾಗಿ ಇರಲಿಲ್ಲ ಎನ್ನುವ ಕಾರಣಕ್ಕೆ ಮತ್ತೆ ಮತ್ತೆ ಆಡಿಷನ್ ನೀಡಬೇಕಾಯಿತು. ಅವತ್ತು ಇದು ಸಿಗದೆ ಹೋಗಿದ್ದರೆ, ಉದ್ಯೋಗಿ ಆಗಿರುತ್ತಿದ್ದೆ. ಅದು ಕೈಗೂಡಿದ್ದರಿಂದ ನಟಿಯಾಗಿದ್ದೇನೆ. ನಟಿಯಾಗಿಯೇ ಇರುತ್ತೇನೆ. ಇದರ ಜೊತೆ ಸಿನಿಮಾ ಕೂಡ ಮಾಡಲು ಸಾಧ್ಯವಾಗಿದೆ.

◆ **ಸಿನಿಮಾ ಮತ್ತು ಧಾರಾವಾಹಿ, ಮುಖ್ಯ ಮತ್ತು ಸಣ್ಣ ಪಾತ್ರ ಇಂತಹ ವ್ಯತ್ಯಾಸಗಳ ಬಗ್ಗೆ ನಿಮಗೆ ಏನೆನಿಸುತ್ತದೆ?**

ಒಳ್ಳೆಯ ಬ್ಯಾನರ್‌ನಲ್ಲಿ ಪ್ರಧಾನ ಪಾತ್ರ ಮಾಡಬೇಕೆಂಬ ಕನಸು ಮೂಡುವುದು ಸಹಜ. ಯಾವುದೇ ಪಾತ್ರಕ್ಕೂ ಸಿಕ್ಕಾಪಟ್ಟೆ ಶ್ರಮ ಮತ್ತು ಶ್ರದ್ಧೆ ಬೇಕಾಗುತ್ತದೆ ಎನ್ನುವುದು ಬಣ್ಣ ಹಚ್ಚಿದ ನಂತರವೇ ನನಗೆ ಗೊತ್ತಾಯಿತು. ಸಿನಿಮಾ ಅಥವಾ ಕಿರುತೆರೆ ಕ್ಷೇತ್ರ ಮಾತ್ರವಲ್ಲ, ಯಾವುದೇ ಕ್ಷೇತ್ರದ ಯಶಸ್ಸು ನಮ್ಮ ಒಳಗೊಳ್ಳುವಿಕೆಯನ್ನು ಅವಲಂಬಿಸಿರುತ್ತದೆ. ಈ ಸತ್ಯ ನನಗೆ ಗೊತ್ತಾಗಿದ್ದೂ ಕೂಡ ತುಂಬ ತಡವಾಗಿ. ನನಗೆ ನಟನೆ ಪ್ಯಾಶನ್, ಅದರಲ್ಲಿ ಸೆಲೆಬ್ರಿಟಿ ಅಥವಾ ನಾಯಕ ನಟಿ ಎನ್ನುವುದು ಮುಖ್ಯವಲ್ಲ. ಕ್ಯಾಮೆರಾ ಮುಂದೆ ಅಭಿನಯಿಸಿ ನನ್ನನ್ನು ನಾನು ಗುರುತಿಸಿಕೊಳ್ಳಬೇಕು ಎನ್ನುವ ಅಭಿಲಾಷೆ ನನ್ನದು. ಸಿನಿಮಾ ಆಗಿರಲಿ ಧಾರಾವಾಹಿ ಆಗಿರಲಿ, ಅಲ್ಲಿ ಮಾಡುವುದು ನಟನೆಯೇ ಅಲ್ಲವೇ? ನಾಯಕಿಯಾದರೂ ಸರಿ ಪುಟ್ಟ ಪಾತ್ರವಾದರೂ ಸರಿ. ನನ್ನ ಅಭಿಲಾಷೆಯಂತೆ ಅಭಿನಯ ಮಾಡುತ್ತಿದ್ದೇನೆ ಎನ್ನುವುದು ಸಮಾಧಾನವನ್ನು ತಂದಿದೆ. ಸಿಕ್ಕ ಅವಕಾಶಕ್ಕೂ ಪ್ರಾಮಾಣಿಕವಾಗಿ ನ್ಯಾಯವನ್ನು ನೀಡಬೇಕು. ನನಗೆ ಇಂತಹ ಪಾತ್ರವೇ ಬೇಕು ಎಂದು ಅನ್ನುವುದು ಮುಖ್ಯ ಅಲ್ಲ. ಇದೇ ಬ್ಯಾನರ್, ಇದೇ ವೇದಿಕೆ ಬೇಕು ಎನ್ನವ ನಿರ್ದಿಷ್ಟತೆ ಬೇಕಿಲ್ಲ. ನನ್ನ ಪ್ರತಿಭೆಯನ್ನು ಹೊರಹೊಮ್ಮಿಸಲು ಒಂದು ಸಾಧನ ಅಗತ್ಯವಿದೆ. ಪಾತ್ರವೊಂದು ನನಗೆ ಸರಿಯಾಗುತ್ತದೆ ಎನ್ನುವುದು ಮನವರಿಕೆಯಾದರೆ ಯಾವ ಪಾತ್ರವನ್ನಾದರೂ ಮಾಡಬಲ್ಲೆ.

◆ **ನಿಮ್ಮ ಬಗ್ಗೆ ಕಮಲಿ ವೀಕ್ಷಕರಲ್ಲಿ ದ್ವೇಷ ಭಾವನೆ ಬಂದಿರಬಹುದು ಅಲ್ಲವೇ?**

ಖಂಡಿತ ಹೌದು. ಸಾಮಾಜಿಕ ಮಾಧ್ಯಮಗಳಲ್ಲಿ ನನಗೆ ತೀವ್ರ ವಿರೋಧವನ್ನೇ ವ್ಯಕ್ತಪಡಿಸಿದ್ದಾರೆ. ಅಲ್ಲಿ ತುಂಬ ಬೈಯುತ್ತಿದ್ದರು. ಪಾತ್ರದ ನನ್ನ ಭಾಷೆ ಮತ್ತು ವರ್ತನೆ ಬಗ್ಗೆ ಟೀಕೆ ಮಾಡ್ತಾ ಇದ್ದರು. ಏಕೆ ಇಷ್ಟು ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದೀರಾ ಎನ್ನುವ ಪ್ರಶ್ನೆಯನ್ನೂ ಕೇಳುತ್ತಿದ್ದರು. ಆದರೆ ಆರು ತಿಂಗಳ ನಂತರ ಬೇರೆಯ ಅನುಭವವೇ ಆಯಿತು. ಯಾರಾದರೂ ವೈಯಕ್ತಿಕವಾಗಿ ಭೇಟಿಯಾದಾಗ ಜನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ಇತ್ತೀಚೆಗೆ ನನ್ನ ಕಾಲಿಗೆ ಪೆಟ್ಟಾಗಿ ಆಸ್ಪತ್ರೆಗೆ ಸೇರಿದಾಗ. ನನ್ನ ವೈದ್ಯರ ತಂದೆ ಬಂದು ಭೇಟಿಯಾಗಿ ಕಮಲಿಯ ವಿಮರ್ಶೆಯನ್ನು ಮಾಡಿದ್ದರು. ನಿಮ್ಮ ನಟನೆ ತುಂಬ ಇಷ್ಟ ಎಂದು ಹೇಳಿದ್ದರು. ಹಳ್ಳಿಯಲ್ಲಿ ಒಬ್ಬ ಅಜ್ಜಿ ನೀನೇನಮ್ಮಾ ಕಮಲಿಯನ್ನು ಅಪಹರಿಸುವುದು ಎಂದು ಪ್ರಶ್ನಿಸಿದ್ದರು. ಉಳಿದಂತೆ ಮೆಚ್ಚುಗೆಯನ್ನು ಕಂಡಿದ್ದೇನೆ.

◆ **ಇಂತಹ ಪಾತ್ರ ಮಾಡಲೇಬೇಕು ಎನ್ನುವ ಕನಸು ಏನಾದರೂ ಇದೆಯಾ?**

ಆ್ಯಕ್ಷನ್ ಸಿನಿಮಾ ಅಂದರೆ ಇಷ್ಟ. ಅದರಲ್ಲೂ ಸ್ತ್ರೀ ಪ್ರಧಾನ ಪಾತ್ರದಲ್ಲಿ ಅವಕಾಶ ಸಿಕ್ಕರೆ ತುಂಬ ಖುಷಿಪಡುತ್ತೇನೆ. ಯಾಕೋ ಏನೋ ಗೊತ್ತಿಲ್ಲ ರಗ್ಗಡ್ ಆಗಿರುವ ಒಂದು ಆಕ್ಷನ್ ಸಿನಿಮಾ ಮಾಡಬೇಕು ಎನ್ನುವ ಆಸೆ ಇದೆ. ಈ ಹಿಂದೆ ಕೆಲಸ ಇಲ್ಲದೆ ಮನೆಯಲ್ಲಿ ಇದ್ದಾಗ ಹೊರದೇಶಕ್ಕೆ ಹೋಗಬೇಕು ಎನ್ನುವ ಕನಸು ಇತ್ತು. ಆದರೆ ನಾನು ತುಂಬ ಅದೃಷ್ಟವಂತೆ. ಬಾಲ್ಯದಲ್ಲಿ ಕಂಡ ಕನಸಿಗೆ ಅನುಗುಣವಾಗಿ ನಟಿಸಲು ಸಾಧ್ಯವಾಗಿದೆ. ಎಷ್ಟೋ ಜನರಿಗೆ ಕನಸು ನನಸಾಗುವುದೇ ಇಲ್ಲ. ದೇವರು ನನ್ನ ಆಸೆಯನ್ನು ಕರುಣಿಸಿದ್ದಾನೆ. ಈಗ ತುಂಬ ಖುಷಿಯಾಗಿಯೇ ಇದ್ದೇನೆ. ಇಲ್ಲೇ ಮುಂದುವರಿಯುತ್ತೇನೆ.

■ **ರಾಘವೇಂದ್ರ ಕೆ.**